ನಿರ್ದೇಶಕರ ಕಛೇರಿ
ಅಲ್ಪಸಂಖ್ಯಾತರ ಕಲ್ಯಾಣ
ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22863617/22864212
ಫ್ಯಾಕ್ಸ್: 080-22863618.
Email: directorgokdom@gmail.com
gokdom@gmail.com
Web: www.gokdom.kar.nic.in
20ನೇ ಮಹಡಿ, ವಿ.ವಿ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂಖ್ಯೆ:ಅಸಂನಿ:ಬಿದಾಯಿ:ಸಿಆರ್-01:2013-14

ದಿ: 05.05.2014

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಅಧಿಕಾರಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆರವರಿಗೆ
ಮತ್ತು
ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಹಿಂದುಳಿದ
ವರ್ಗಗಳ ಕಲ್ಯಾಣ ಇಲಾಖೆ ರವರಿಗೆ

ಮಾನ್ಯರೆ,

**ವಿಷಯ:** 2014-15ನೇ ಸಾಲಿಗೆ ಬಿದಾಯಿ ಯೋಜನೆಯಡಿ ತಾತ್ಕಾಲಿಕ ಆರ್ಥಿಕ ಮತ್ತು ಭೌತಿಕ ಗುರಿ ನಿಗಧಿಪಡಿಸುವ ಬಗ್ಗೆ.

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲುಡಿ 200 ಎಂಡಿಎಸ್ 2014,ದಿ: 15.04.2014
2) ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲುಡಿ 533 ಎಂಡಿಎಸ್ 2013, ದಿ: 13.11.2013

* * * * *

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಆದೇಶದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಗಳನ್ನು 2014-15ನೇ ಆರ್ಥಿಕ ಸಾಲಿನಲ್ಲಿ ಮುಂದುವರೆಸಿ ಆದೇಶಿಸಲಾಗಿದೆ. ಅದರಲ್ಲಿ ಬಿದಾಯಿ ಯೋಜನೆಯು ಸಹ ಒಂದಾಗಿರುತ್ತದೆ. ಸದರಿ ಕಾರ್ಯಕ್ರಮಕ್ಕಾಗಿ 2014-15ನೇ ಸಾಲಿಗೆ ಒಟ್ಟು ರೂ 2000.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. ಸದರಿ ಅನುದಾನಕ್ಕೆ ಜಿಲ್ಲಾವಾರು ಆರ್ಥಿಕ ಮತ್ತು ಭೌತಿಕ ಗುರಿಯನ್ನು ನಿಗಧಿಪಡಿಸಿ ಈ ಪತ್ರಕ್ಕೆ ಲಗತ್ತಿಸಿದೆ.

ಅದರಂತೆ, ಅರ್ಜಿಗಳನ್ನು ತಮ್ಮ ಜಿಲ್ಲೆಗಳಲ್ಲಿ ವ್ಯಾಪಕ ಪ್ರಚಾರ ನೀಡಿ ಅರ್ಜಿಗಳನ್ನು ಅಹ್ವಾನಿಸಿ, ಫಲಾನುಭವಿಗಳಿಂದ ಅರ್ಜಿಗಳನ್ನು ಪಡೆದು ಸರ್ಕಾರಿ ಆದೇಶದಂತೆ ಕ್ರಮ ಕೈಗೊಳ್ಳಲು ತಿಳಿಸಿದೆ. ಜಿಲ್ಲೆಗೆ ನಿಗಧಿಪಡಿಸಿರುವ ಗುರಿಗೆ ತಕ್ಕಂತೆ ಹಾಗೂ ಅತೀ ಕಡಿಮೆ ಆದಾಯವಿರುವ ಅರ್ಹ ಫಲಾನುಭವಿಗಳ ಪೈಕಿ, ವಿಧವೆ ತಾಯಿಯ ಕುಟುಂಬ/ವಿಕಲಚೇತನ ಕುಟುಂಬದವರಿಗೆ, ವಿಧವೆ ಮತ್ತು ವಿಚ್ಛೇದಿತ ಮಹಿಳೆಯರಿಗೆ ಮೊದಲ ಆದ್ಯತೆ ಮೇರೆಗೆ ಸಹಾಯಧನ ಮಂಜೂರಾತಿ ನೀಡತಕ್ಕದ್ದು.

1) ನಿಗಧಿಪಡಿಸಿದ ಗುರಿಯಲ್ಲಿ ಯಾವುದಾದರೂ ಸಮುದಾಯದ ಅರ್ಜಿಗಳು ಬಾರದೇ ಇದ್ದಲ್ಲಿ ಬಂದಿರುವ ಅರ್ಜಿಗಳಿಗೆ ಮೇಲೆ ವಿವರಿಸಿರುವಂತೆ ಕ್ರಮ ಕೈಗೊಳ್ಳುವುದು.

2) ಭೌತಿಕ ಗುರಿಯಲ್ಲಿ ಸಿಖ್ ಮತ್ತು ಪಾರ್ಸಿ ಜನಾಂಗದವರಿಗೆ ಗುರಿನಿಗಧಿಪಡಿಸಲು ಶೇಕಡಾವಾರು ಕಡಿಮೆ ಜನಸಂಖ್ಯೆ ಇರುವುದರಿಂದ, ಶೂನ್ಯವಾಗಿರುವುದು. ಆದುದರಿಂದ, ನಿಮ್ಮ ಜಿಲ್ಲೆಯಲ್ಲಿ ಸದರಿ ಸಮುದಾಯದಿಂದ ಅರ್ಜಿ ಬಂದಲ್ಲಿ ಮೇಲೆ ವಿವರಿಸಿರುವಂತೆ ಪರಿಗಣಿಸಲು ತಿಳಿಸಿದೆ.

3) ಸದರಿ ಯೋಜನೆಯಡಿ 2013-14ನೇ ಸಾಲಿನಲ್ಲಿ ಬಂದಿರುವ ಅರ್ಜಿಗಳಲ್ಲಿ ಬಾಕಿ ಇರುವ ಅರ್ಹ ಅರ್ಜಿಗಳನ್ನು ಮೊದಲು ಪರಿಗಣಿಸುವುದು.

4) ಅರ್ಜಿದಾರರು ಅರ್ಜಿಯನ್ನು ಮದುವೆ ದಿನಾಂಕದ ಒಂದು ವರ್ಷ ಮುಂಚಿತವಾಗಿ ಸಲ್ಲಿಸತಕ್ಕದ್ದು.

5) ನಿಮ್ಮ ಜಿಲ್ಲೆಗೆ ಅಗತ್ಯವಿದ್ದಲ್ಲಿ ತಾಲ್ಲೂಕುವಾರು ಗುರಿಯನ್ನು ನಿಗಧಿಪಡಿಸಿಕೊಳ್ಳುವುದು.

6) ಈ ಪತ್ರಕ್ಕೆ ಅರ್ಜಿ ನಮೂನೆ, ದಾಖಲಾತಿಗಳ ವಿವರ ಮತ್ತು ಮುಚ್ಚಳಿಕೆ ಪತ್ರಗಳನ್ನು ಲಗತ್ತಿಸಿದೆ.

ಸದರಿ ಕಾರ್ಯಕ್ರಮವನ್ನು ಜಾರಿಗೊಳಿಸಲು ಕೂಡಲೇ ಕ್ರಮ ಕೈಗೊಂಡು, ತೆಗೆದುಕೊಂಡ ಕ್ರಮದ ಬಗ್ಗೆ ನಿರ್ದೇಶನಾಲಯಕ್ಕೆ ಮಾಹಿತಿಯನ್ನು ಸಲ್ಲಿಸಲು ತಿಳಿಸಿದೆ. ಪ್ರತಿ ಮಾಹೆ ಸದರಿ ಕಾರ್ಯಕ್ರಮದ ಪ್ರಗತಿ ವರದಿಯನ್ನು ತಪ್ಪದೇ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಬೆಂಗಳೂರು.

## ಅರ್ಜಿದಾರರು ಬಿದಾಯಿ ಯೋಜನೆಯಡಿ ಸಹಾಯಧನಕ್ಕಾಗಿ ಸಲ್ಲಿಸಬೇಕಾದ ದಾಖಲಾತಿಗಳು

1) ನಿಗಧಿತ ನಮೂನೆಯಲ್ಲಿ ಅರ್ಜಿ
2) ವಧುವಿನ ಕುಟುಂಬದ ವಾರ್ಷಿಕ ಆದಾಯ ಮತ್ತು ಜಾತಿ ಪ್ರಮಾಣ ಪತ್ರ
3) ವಧು ಜನ ಪ್ರಮಾಣ ಪತ್ರ/ಎಸ್.ಎಸ್.ಎಲ್.ಸಿ /ಟಿ.ಸಿ/ನೋಟರಿಯಿಂದ ಪಡೆದ ಅಫೀಡವಿಟ್ ಯಾವುದಾದರೊಂದು ದಾಖಲೆ
4) ರಾಜ್ಯದಲ್ಲಿ ಕನಿಷ್ಠ 3 ವರ್ಷ ವಧು ವಾಸವಾಗಿರುವ ಬಗ್ಗೆ ತಹಸಿಲ್ದಾರರಿಂದ ಪತ್ರ/ಧೃಡೀಕೃತ ದಾಖಲೆ ರೇಷನ್ ಕಾರ್ಡ/ಚುನಾವಣಾ ಆಯೋಗ ನೀಡಿರುವ ಗುರುತಿನ ಚೀಟಿ (ಓಟರ್ ಐಡಿ)/ಡ್ರೈವಿಂಗ್ ಲೈಸೆಂಸ್ಸ್/ಆಧಾರ್ ಕಾರ್ಡ
5) ಲಗತ್ತಿಸಿರುವ ನಮೂನೆಯಲ್ಲಿ ಪೂರ್ವ ಭಾವಿ ಘೋಷಣೆ ಪತ್ರ.
6) ವಧುವಿನ ಭಾವಾ ಚಿತ್ರ.
7) ಮದುವೆ ಲಗ್ನ ಪತ್ರಿಕೆ/ನಿಗಧಿ ಪಡಿಸಿದ ದಿನಾಂಕದ ಅಧಿಕೃತ ದಾಖಲೆ
8) ವಿಚ್ಛೇದಿನ ವರ /ವಧು ಆಗಿದ್ದಲ್ಲಿ, ವಿಚ್ಛೇದನೆ ಪಡೆದಿರುವುದಕ್ಕೆ ಧೃಢೀಕೃತ ದಾಖಲಾತಿಗಳು
9) ವಿಧವೆಯಾಗಿದ್ದಲಿ ಗಂಡನ ಮರಣ ಪ್ರಮಾಣ ಪತ್ರ ಸಲ್ಲಿಸುವುದು.
10) ವಿಕಲಚೇತನರಿದ್ದರೆ ಅಂಗವಿಕರ ಪ್ರಮಾಣ ಪತ್ರ.
11) ಮದುವೆ ನಂತರ ವಧು–ವರನ ಭಾವ ಚಿತ್ರ, ಧಾರ್ಮಿಕ ಸಂಸ್ಥೆ ನೀಡಿರುವ ಮದುವೆ ಪ್ರಮಾಣ ಪತ್ರ/ ಉಪ ನೊಂದನಾಧಿಕಾರಿಗಳು ನೀಡಿರುವ ಮದುವೆ ನೊಂದಣಿ ಪತ್ರ/ಮದುವೆ ಆಗಿರುವುದಕ್ಕೆ ಅಧಿಕೃತ ದಾಖಲೆ ನೀಡುವುದು.